740 ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಜಿಲ್ಲಾ ಕೇಂದ್ರದಲ್ಲಿ ವಿವಿಧ ಜಿಲ್ಲಾ ಕಛೇರಿಗಳ ಸಂಕೀರ್ಣಕ್ಕೆ ಎಷ್ಟೆಷ್ಟು ಹಣ ಮಂಜೂರಾಗಿರುತ್ತದೆ(ವಿವರ ನೀಡುವುದು);

ಆ) ಅದರಲ್ಲಿ ಪ್ರತಿ ಕಾಮಗಾರಿಗೂ ಬಿಡುಗಡೆಯಾಗಿರುವ ಹಣವೆಷ್ಟು? ಈಗ ಈ ಕಾಮಗಾರಿಗಳು ಯಾವ ಹಂತದಲ್ಲಿವೆ;

ಇ) ಉಳಿದ ಹಣವನ್ನು ಎಂದಿನಿಂದ ಬಿಡುಗಡೆ ಮಾಡಿ, ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ)

1) ರಾಮನಗರದಲ್ಲಿ ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡಕ್ಕೆ ರೂ.30.00 ಕೋಟಿ ಮಂಜೂರಾಗಿದೆ. ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಿಗೆ ದಿನಾಂಕ: 31-01-2007 ರಲ್ಲಿ ಪ್ರಾರಂಭಿಸಲಾಗಿರುತ್ತದೆ.

2) ರಾಮನಗರ ಜಿಲ್ಲಾ ಕೇಂದ್ರದಲ್ಲಿ ನಿರ್ಮಿಸುತ್ತಿರುವ ಕಂದಾಯ ಭವನ, ಪಂಚಾಯತ್ ಭವನ ಮತ್ತು ಪೊಲೀಸ್ ಭವನ ಕಟ್ಟಡಗಳ ಸಂಕೀರ್ಣ ಕಾಮಗಾರಿಗಳಿಗೆ ರೂ.33.00 ಕೋಟಿಗಳ ಮಂಜೂರಾತಿ ನೀಡಲಾಗಿರುತ್ತದೆ. ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಿಗೆ ರೂ.37.00 ಕೋಟಿಗಳಿಗೆ ಕರಾರು ಆಗಿದ್ದು, ದಿನಾಂಕ: 28-07-2007 ರಲ್ಲಿ ಕೆಲಸ ಪ್ರಾರಂಭಿಸಲಾಗಿರುತ್ತದೆ.

ಆ) ಜಿಲ್ಲಾ ಕಛೇರಿ ಸಂಕೀರ್ಣಕ್ಕೆ ರೂ.18.83 ಕೋಟಿ ಬಿಡುಗಡೆಯಾಗಿರುತ್ತದೆ. ಈ ಕಾಮಗಾರಿಯ 3ನೇ ಮಹಡಿಯ ಆರ್‌ಸಿಸಿ ಛಾವಣಿ ಹಾಕಲು ಸೆಂಟರಿಂಗ್ ಕೆಲಸ ಪ್ರಗತಿಯಲ್ಲಿದೆ ಮತ್ತು 2ನೇ ಮಹಡಿಯ ಕಲ್ಲು ಕಟ್ಟಡದ ಕೆಲಸ ಪ್ರಗತಿಯಲ್ಲಿರುತ್ತದೆ. ಕಂದಾಯ ಭವನ, ಪಂಚಾಯತ್ ಭವನ ಮತ್ತು ಪೊಲೀಸ್ ಭವನ ಕಾಮಗಾರಿಗಳಿಗೆ ಒಟ್ಟು ರೂ.28.24 ಕೋಟಿಗಳು ಬಿಡುಗಡೆಯಾಗಿರುತ್ತದೆ.

<u>ಕಂದಾಯ ಭವನ :-</u> ಮುಖ್ಯ ಕಟ್ಟಡದ ಬ್ಲಾಕ್-1 ಮತ್ತು 2ರ ಎಲ್ಲಾ ಮಹಡಿಗಳಿಗೆ ಛಾವಣಿಗಳನ್ನು ಹಾಕಲಾಗಿದೆ. ಬ್ಲಾಕ್-3ರ 2 ಮತ್ತು 3ನೇ ಮಹಡಿಗಳ ಕೆಲಸ ಪ್ರಗತಿಯಲ್ಲಿದೆ.

<u>ಪಂಚಾಯತ್ ಭವನ :-</u> ಮುಖ್ಯ ಕಟ್ಟಡದ ಎಲ್ಲಾ ಮಹಡಿಗಳ ಮೇಲ್ಚಾವಣಿ ಹಾಕಲಾಗಿದೆ. ಸಭಾ ಭವನದ 1ನೇ ಮಹಡಿಯ ಕೆಸ ಪ್ರಗತಿಯಲ್ಲಿದೆ.

<u>ಪೊಲೀಸ್ ಭವನ :-</u> ಮುಖ್ಯ ಕಟ್ಟಡದ ಎಲ್ಲಾ ಮಹಡಿಗಳ ಮೇಲ್ಚಾವಣಿ ಕೆಲಸ ಇತ್ಯಾದಿ ಕೆಲಸಗಳು ಪ್ರಗತಿಯಲ್ಲಿವೆ.

ಮೇಲಿನ ಎಲ್ಲಾ ಕಟ್ಟಡಗಳ ಗೋಡೆ ಕಟ್ಟುವುದು, ಮಡ್ಡಿ ಮಾಡುವುದು, ವಿದ್ಯುದ್ದೀಕರಣ ಕೆಲಸ ಇತ್ಯಾದಿ ಕೆಲಸಗಳು ಪ್ರಗತಿಯಲ್ಲಿವೆ.

ಇ) ಕಾಮಗಾರಿಯ ಪ್ರಗತಿಯನ್ನು ಅವಲಂಭಿಸಿ ಉಳಿದ ಹಣವನ್ನು ಬಿಡುಗಡೆ ಮಾಡಲಾಗುವುದು.

ಜಿಲ್ಲಾ ಸಂಕೀರ್ಣ ಕಛೇರಿಯ ಉಳಿದ ಕಾಮಗಾರಿಯನ್ನು ನವೆಂಬರ್ 2009ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಕಂದಾಯ ಭವನ, ಪಂಚಾಯತ್ ಭವನ ಮತ್ತು ಪೊಲೀಸ್ ಭವನ ಕಾಮಗಾರಿಯನ್ನು ದಿನಾಂಕ: 21-01-2010ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

1108 ಶ್ರೀ ಅಮರೇಶ್ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳುಬಾಗಿಲು ತಾಲ್ಲೂಕಿನಲ್ಲಿರುವ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು (ವಿವರ ಒದಗಿಸುವುದು);

ಆ) ಅರಣ್ಯ ಪ್ರದೇಶದ ಭೂಮಿಯನ್ನು ಎಷ್ಟು ಮಂದಿ ರೈತರು ಒತ್ತುವರಿ ಮಾಡಿಕೊಂಡಿದ್ದಾರೆ; ಒತ್ತುವರಿ ಮಾಡಿ ಕೊಂಡಿರುವ ರೈತರುಗಳಿಗೆ ಸರ್ಕಾರವು ವಿಧಿಸುವ ದಂಡವೇನು;

ಇ) ಹಲವಾರು ವರ್ಷಗಳಿಂದ ಒತ್ತುವರಿ ಭೂಮಿಯಲ್ಲಿಯೇ ಜೀವನವನ್ನು ನಡೆಸುತ್ತಿರುವ ಬಡ ಕುಟುಂಬಗಳು ರೈತರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಮುಳುಬಾಗಿಲು ತಾಲ್ಲೂಕಿನಲ್ಲಿರುವ ಅರಣ್ಯ ಪ್ರದೇಶದ ವಿವರ ಈ ಕೆಳಕಂಡಂತೆ ಇರುತ್ತದೆ.